ಚಿತ್ರಪಟ ಕಥನ

# ಪ್ರೀತಿ ಪ್ರೇಮ ಪ್ರಣಯ

## ಕಂಚುಕುಟಿಗಗಳ ವೃತ್ತಾಂತ



ಪ್ರಿಯತಮೆಗೆ ಹಣ್ಣಿನ ಉಡುಗೊರೆ ಜೊತೆಗೆ ಪ್ರೇಮನಿವೇದನೆ

**ಕಂಚುಕುಟಿಗಗಳ ಮರಿಗಳ ಪಾಲನೆ ಪೋಷಣೆಯ ಕಾಳಜಿ ಮನುಷ್ಯರ ನಡವಳಿಕೆಯನ್ನೇ ಹೋಲುತ್ತದೆ.**

**ಡಾ. ಎಸ್. ಶಿಶುಪಾಲ**

ಪಕ್ಷಿ ಸಂತತಿಯ ವಿಶಿಷ್ಟ ಸದಸ್ಯ ಕಂಚುಕುಟಿಗ. ದೇಹದ ಮೇಲ್ಭಾಗ ಎಲೆ ಹಸಿರು ಬಣ್ಣ. ಕೆಳಭಾಗ ತಿಳಿಹಳದಿ ಬಣ್ಣವಿದ್ದು, ಹಸಿರು ಗೆರೆಗಳ ಶೃಂಗಾರ. ಮುಂತಲೆ ಮತ್ತು ಎದೆಯಲ್ಲಿ ಕಡುಗೆಂಪು ಚಿತ್ತಾರ. ಕುತ್ತಿಗೆ, ಕಣ್ಣಿನ ಮೇಲೆ ಮತ್ತು ಕೆಳಗೆ ಹಳದಿ ಬಣ್ಣ.

ಚಿಕ್ಕ ಮತ್ತು ಗಟ್ಟಿಯಾದ ಕಪ್ಪು ಕೊಕ್ಕಿನ ಕಂಚುಕುಟಿಗಗಳಲ್ಲಿ, ಗಂಡು–ಹೆಣ್ಣುಗಳಲ್ಲಿ ಗುರುತಿಸುವಂತಹ ವ್ಯತ್ಯಾಸಗಳಿಲ್ಲ. ಇವು ಆಹಾರವಾಗಿ ಹಣ್ಣುಗಳನ್ನು ತಿನ್ನುತ್ತವೆ. ಕೆಲವೊಮ್ಮೆ ರೆಕ್ಕೆಯಿರುವ ಕೀಟಗಳೂ ಆದೀತು. ಕಮ್ಮಾರ ಕಂಚಿನ ಪಾತ್ರೆಯನ್ನು ಸುತ್ತಿಗೆಯಿಂದ ಬಡಿದಂತಹ ಕೂಗು ಅವಳದು. 'ಕಾಪರ್‌ಸ್ಮಿತ್ ಬಾರ್ಬೆಟ್' ಎಂದು ಇಂಗ್ಲಿಷ್‌ನಲ್ಲಿ ಕರೆಸಿಕೊಳ್ಳುವ ಇದರ ಪ್ರಾಣಿಶಾಸ್ತ್ರೀಯ ಹೆಸರು, 'ಸೈಲೊಪೊಗಾನ್ ಹಿಮೊಸಿಫಾಲ' (Psilopogon haemocephala).

ಕತ್ತುಬ್ಬಿಸಿ ದೊಡ್ಡದಾದ ಸರಣಿಯಂತಹ ಟಂಕ್, ಟಂಕ್ ಎನ್ನುವ ಸ್ವರ ಹೊರಟಿತೆಂದರೆ ಅದು ಪ್ರಣಯಕೇಳಿಯ ಸಂಕೇತ ಎಂದರ್ಥ. ನಿಮಿಷಕ್ಕೆ 60ರಿಂದ 80ರ ತನಕ ಸಂಗಾತಿಗಾಗಿ ಕರೆ ಮೊಳಗುತ್ತದೆ. ಪ್ರಜನನ ಕಾಲದಲ್ಲಿ ಹಲವಾರು ಗಂಡುಗಳು ಹೆಣ್ಣನ್ನು ಕೂಗುತ್ತಿರುತ್ತವೆ.



ಹಣ್ಣಿನ ಸಂತೆಯಲ್ಲಿ ಕಂಚುಕುಟಿಗ

ಜನವರಿಯಿಂದ ಜೂನ್‌ವರೆಗೆ ಪ್ರಜನನ ಕಾಲ. ಪ್ರಣಯಕ್ಕಾಗಿ ಹೆಣ್ಣಿಗೆ ಗಂಡು ಪ್ರೇಮ ನಿವೇದನೆಯೊಂದಿಗೆ ರುಚಿಯಾದ ಹಣ್ಣುಗಳನ್ನು ಉಡುಗೊರೆಯಾಗಿ ನೀಡಿ ಮನವೊಲಿಸಿಕೊಳ್ಳಲು ಪ್ರಯತ್ನಿಸುತ್ತದೆ.

ಕಂಚುಕುಟಿಗಗಳು ಮರಗಳಲ್ಲಿನ ನಿರ್ಜೀವ ಒಣಕೊಂಬೆಯನ್ನು ಆಯ್ದುಕೊಂಡು, ಕೊಕ್ಕಿನಿಂದ ಕೆತ್ತಿ ಮಾಡಿದ ಕುಳಿಯನ್ನು ಗೂಡಾಗಿ ಪರಿವರ್ತಿಸುತ್ತವೆ. ಭೂಮಿಯಿಂದ 10 ಮೀಟರ್ ಎತ್ತರದಲ್ಲಿ ಅಡ್ಡಲಾಗಿರುವ ಮರದ ಕೊಂಬೆಯ ಕೆಳಗಿನ ಮುಖದಲ್ಲಿ ಮಾಡಿದ ಪ್ರವೇಶ ದ್ವಾರ.

ಪ್ರಣಯದ ಫಲವಾಗಿ ಹೆಣ್ಣು ಅಚ್ಚ ಬಿಳಿ ಬಣ್ಣದ ಮೂರು ಮೊಟ್ಟೆಗಳನ್ನಿಡುತ್ತದೆ. ಮೊಟ್ಟೆಗಳಿಗೆ ಕಾವು ಕೊಡುವ ಕಾಲ ಹದಿನಾಲ್ಕು ದಿನಗಳು. ತಂದೆ ತಾಯಿಯರಿಬ್ಬರೂ ನಾಲ್ಕು ವಾರಗಳ ತನಕ ಗೂಡಿನಲ್ಲಿಯೇ ಮರಿಗಳ ಪೋಷಣೆ ಮಾಡುವವು. ಮೊಟ್ಟೆಯಿಂದ ಮರಿಗಳು ಹೊರ ಬಂದ ಪ್ರಾರಂಭದಲ್ಲಿ ವಿವಿಧ ಕೀಟಗಳನ್ನೊಳಗೊಂಡ ಪ್ರೊಟಿನ್‌ಯುಕ್ತ ಆಹಾರ ಒದಗಿಸುವ ಮೂಲಕ, ಮರಿಗಳ ಮೂಳೆಗಳ ಬೆಳವಣಿಗೆಗೆ ಅಗತ್ಯವಾದ ಪೋಷಕಾಂಶಗಳನ್ನು ನೀಡುತ್ತವೆ. ಮರಿಗಳು ಹಾರಲು ತಯಾರಾದ ದಿನಗಳಲ್ಲಿ ಸಕ್ಕರೆ ಹೆಚ್ಚಿರುವ ಹಣ್ಣುಗಳ ಆಹಾರ ಅಗತ್ಯವಾದ ಶಕ್ತಿಯನ್ನು ನೀಡುತ್ತವೆ.

ರಸಭರಿತ ಹಣ್ಣುಗಳನ್ನು ತಂದು ಗೂಡಿಗಿಂತ ಸ್ವಲ್ಪ ದೂರದಲ್ಲಿ ಕುಳಿತು ಯಾವ ತೊಂದರೆಯಿಲ್ಲವೆಂದು ಖಚಿತಪಡಿಸಿಕೊಂಡು ಮರಿಗಳಿಗೆ ತಿನ್ನಿಸುತ್ತವೆ. ಆಹಾರ ನೋಡಿ ತಮ್ಮ ಬಾಯಿಯಲ್ಲಿ ರಸ ತೊಟ್ಟಿಕ್ಕುತ್ತಿದ್ದರೂ ಮರಿಗಳ ಊಟವೆಂದು ತಿನ್ನಲಾರದ ಸಂಯಮ ಪಾಲಕ ಕಂಚುಕುಟಿಗ ಹಕ್ಕಿಗಳು. ಗೂಡನ್ನು ಸ್ವಚ್ಛವಾಗಿಡಲು ಪೋಷಕ ಹಕ್ಕಿಗಳು ಮರಿಗಳ ಮಲವನ್ನು ಕೊಕ್ಕಿನಿಂದ ಹಿಡಿದು ದೂರ ಸಾಗಿಸಿ ಬಿಸಾಡುತ್ತವೆ. ಈ ಮಲದಲ್ಲಿರುವ ಬೀಜಗಳು ಮೊಳಕೆಯೊಡೆದು ಹೊಸ ಸಸಿಗಳಿಗೆ ಕಾರಣವಾಗಿ ಪ್ರಕೃತಿಚಕ್ರ ಸಂಪನ್ನಗೊಳ್ಳುತ್ತದೆ.

ಪ್ರತಿಕ್ರಿಯಿಸಿ: feedback@sudha.co.in



ಉಡುಗೊರೆ ಸ್ವೀಕರಿಸಿ ಪರಸ್ಪರ ಒಪ್ಪಿಗೆ



ಮಿಲನ ಮಹೋತ್ಸವದ ಸಂಭ್ರಮ